KAHS610027872023

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚನ್ನರಾಯಪಟ್ಟಣ**

**ಉಪಸ್ಥಿತರು : ಶ್ರೀಮತಿ ಕುಸುಮ ವಿ.** ಬಿ.ಎ.ಎಲ್., ಎಲ್ ಎಲ್.ಬಿ.
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.

**ದಾವಾ ಸಂಖ್ಯೆ 779/2023**

**ದಿನಾಂಕ : 11 ನೇ ಮಾರ್ಚ್ 2026**

**ವಾದಿಯರು** : 1. ಶ್ರೀ. ಬಿ.ಬಿ ನಾಗರಾಜೇಗೌಡ,
ಬಿನ್ ಲೇಟ್ ಬೋಜೇಗೌಡ,
ಸುಮಾರು 45 ವರ್ಷ ವಯಸ್ಸು,

2. ಶ್ರೀ. ಬಿ.ಬಿ ರಮೇಶ,
ಬಿನ್ ಲೇಟ್ ಬೋಜೇಗೌಡ,
ಸುಮಾರು 43 ವರ್ಷ ವಯಸ್ಸು,

ಇಬ್ಬರ ವಾಸಃ ಬೆಕ್ಕ ಗ್ರಾಮ, ಶ್ರವಣಬೆಳಗೊಳ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ.

**(ಪ್ರತಿನಿಧಿಸುವವರು : ಶ್ರೀ. ಕೆ.ಎನ್.ಎಸ್ ವಕೀಲರು)**

**ವಿರುದ್ಧ**

**<u>ಪ್ರತಿವಾದಿಯರು</u>** : 1. ಶ್ರೀಮತಿ. ಪುಟ್ಟಮ್ಮ,
ಕೋಂ ಲೇಟ್ ಬೋಜೇಗೌಡ,
ಸುಮಾರು 70 ವರ್ಷ ವಯಸ್ಸು,

2. ಶ್ರೀ. ಬಿ.ಬಿ ಮಂಜೇಗೌಡ,
ಬಿನ್ ಲೇಟ್ ಬೋಜೇಗೌಡ,
ಸುಮಾರು 52 ವರ್ಷ ವಯಸ್ಸು,
ಇಬ್ಬರ ವಾಸಃ ಬೆಕ್ಕ ಗ್ರಾಮ, ಶ್ರವಣಬೆಳಗೊಳ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ.

**(ಪ್ರತಿವಾದಿಯರನ್ನು ಪ್ರತಿನಿಧಿಸುವವರು : ಶ್ರೀ. ಸಿ.ಎಲ್.ಬಿ ವಕೀಲರು)**

| | | |
|---|---|---|
| 1. ದಾವಾ ಹೂಡಿದ ದಿನಾಂಕ | ಃ | 16.09.2023 |
| 2. ದಾವಾ ಸ್ವರೂಪ | ಃ | ಭಾಗಾಂಶಕ್ಕಾಗಿ |
| 3. ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | ಃ | 28.07.2025 |
| 5. ತೀರ್ಪನ್ನು ಪ್ರಕಟಿಸಿದ ದಿನಾಂಕ | ಃ | 11.03.2026 |
| 6. ಒಟ್ಟು ಅವಧಿ | ಃ | ವರ್ಷ ತಿಂಗಳು ದಿನ<br>2 5 25 |

**(ಶ್ರೀಮತಿ ಕುಸುಮ ವಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ಚನ್ನರಾಯಪಟ್ಟಣ.**

## **<u>ಃ ತೀರ್ಪು ಃ</u>**

ದಾವಾ ಷಡ್ಯೂಲ್ ಸ್ವತ್ತುಗಳಲ್ಲಿ ವಾದಿಯರ ಕಾನೂನು ಬದ್ಧವಾಗಿ 2/4 ಭಾಗದ

ಹಿಸ್ಸೆಯನ್ನು ವಿಭಜಿಸಬೇಕಾಗಿ ಹಾಗೂ ಇತರೆ ತಾಜಾ ಪರಿಹಾರಗಳನ್ನು ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ.

2. <u>ವಾದಪತ್ರದ ಸಂಕ್ಷೀಪ್ತ ವಿವರಣೆ</u> :

ವಾದಿಯರು ಮತ್ತು 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಗೆ ಖಾಸಾ ಮಕ್ಕಳುಗಳಾಗಿರುತ್ತಾರೆ. ವಾದಿಯರು ಮತ್ತು 2 ನೇ ಪ್ರತಿವಾದಿಯರು ಸಹೋದರರಾಗಿರುತ್ತಾರೆ. ವಾದಿಯರು ಮತ್ತು ಪ್ರತಿವಾದಿಯರು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿದ್ದು, ವಾದಿಯರು ಮತ್ತು 2 ನೇ ಪ್ರತಿವಾದಿಯ ತಂದೆ ಹಾಗೂ 1 ನೇ ಪ್ರತಿವಾದಿಯ ಗಂಡನಾದ ಬೋಜೇಗೌಡರು ಬದುಕ್ಕಿದ್ದ ಕಾಲದಲ್ಲಿ ವಾದಿಯರ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಕರ್ತರಾಗಿದ್ದರು. ವಾದಿ ಮತ್ತು ಪ್ರತಿವಾದಿಯರು ತಮ್ಮ ಕುಟುಂಬಕ್ಕೆ ಸೇರಿದ ದಾವಾ ಅನುಸೂಚಿ ಸ್ವತ್ತುಗಳನ್ನು ಒಟ್ಟಾಗಿ ಅನುಭವಿಸುತ್ತಾ ಬಂದಿದ್ದು, ಸದರಿ ದಾವಾ ಷಡ್ಯೂಲ್ ಸ್ವತ್ತುಗಳು ವಾದಿಯರ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಪಿತ್ರಾರ್ಜಿತವಾದ ಸ್ವತ್ತುಗಳಾಗಿರುತ್ತವೆ.

3. ವಾದಿಯರ ಮತ್ತು 2 ನೇ ಪ್ರತಿವಾದಿಯ ತಂದೆ ಹಾಗೂ 1 ನೇ ಪ್ರತಿವಾದಿಯ ಗಂಡನಾದ ಲೇಟ್ ಬೋಜೇಗೌಡರು ದಿನಾಂಕ: 15 08 2012 ರಂದು ಮರಣ ಹೊಂದಿದ್ದು, ಅವರ ಮರಣಾ ನಂತರ 2 ನೇ ಪ್ರತಿವಾದಿಯು ಕುಟುಂಬದ ಹಿರಿಯನಾಗಿದ್ದು, ಒಟ್ಟು ಕುಟುಂಬದ ಕರ್ತನಾಗಿರುತ್ತಾನೆ. ದಾವಾ ಷಡ್ಯೂಲ್ ಸ್ವತ್ತುಗಳು ವಾದಿಯರ ಹಾಗೂ 2 ನೇ ಪ್ರತಿವಾದಿಯ ತಂದೆ ಮತ್ತು 1 ನೇ ಪ್ರತಿವಾದಿಯ ಗಂಡನಾದ ಲೇಟ್ ಬೋಜೇಗೌಡ ಬಿನ್ ಮರಿನಂಜಪ್ಪ ರವರ ಹೆಸರಿನಲ್ಲಿಯೇ ಮುಂದುವರೆದುಕೊಂಡು ಬರುತ್ತಿರುತ್ತವೆ. ಸದರಿ ಸ್ವತ್ತುಗಳನ್ನು ವಾದಿಯರು ಮತ್ತು ಪ್ರತಿವಾದಿಯರು ಒಟ್ಟಾಗಿ ಅನುಭವಿಸುತ್ತಾ ಬರುತ್ತಿರುತ್ತಾರೆ.

4. ವಿದ್ಯಮಾನಗಳು ಹೀಗಿರುವಲ್ಲಿ ಒಟ್ಟು ಕುಟುಂಬದ ಹಾಗೂ ಪಿತ್ರಾರ್ಜಿತವಾದ ದಾವಾ ಅನುಸೂಚಿ ಸ್ವತ್ತುಗಳಲ್ಲಿ ವಾದಿಯರ ಮತ್ತು ಪ್ರತಿವಾದಿಯರ ನಡುವೆ ಯಾವುದೇ ನೊಂದಾಯಿತ ದಾಖಲಾತಿ ಮೂಲಕವಾಗಲೀ ಮತ್ತು ಇನ್ನಿತರೆ

ಯಾವುದೇ ದಾಖಲಾತಿ ಮೂಲಕವಾಗಲೀ ವಿಭಾಗವಾಗಿರುವುದಿಲ್ಲ. ಆದ್ದರಿಂದ ವಾದಿಯರಿಗೆ ದಾವಾ ಅನುಸೂಚಿ ಸ್ವತ್ತುಗಳಲ್ಲಿ ಭಾಗಾಂಶದ ಹಕ್ಕಿದ್ದು, ತಮ್ಮ ಭಾಗದ ಹಕ್ಕಾದ 2/4 ಭಾಗವನ್ನು ಉತ್ತಮ ಮತ್ತು ಮಧ್ಯಮ ವಿಂಗಡಣೆಯಿಂದ ವಿಂಗಡಿಸಿ ಪ್ರತ್ಯೇಕ ಸ್ವಾಧೀನವಹಿಸುವಂತೆ ವಾದಿಯರು ಪ್ರತಿವಾದಿಯರನ್ನು ಕೇಳುತ್ತಾ ಬಂದಾಗ್ಯೂ, ಪ್ರತಿವಾದಿಯರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ ವಾದಿಯರು ದಾವಾ ಅನುಸೂಚಿ ಸ್ವತ್ತುಗಳಲ್ಲಿ ತಮಗಿರುವ 2/4 ಭಾಗವನ್ನು ಉತ್ತಮ ಮಧ್ಯಮ ವಿಂಗಡಣೆಯಿಂದ ವಿಂಗಡಿಸಿ ಪ್ರತ್ಯೇಕ ಸ್ವಾಧೀನವನ್ನು ವಹಿಸುವಂತೆ ಕೋರಿ ಸದರಿ ದಾವೆಯನ್ನು ಘನ ನ್ಯಾಯಾಲಯದಲ್ಲಿ ದಾಖಲು ಮಾಡಿರುತ್ತಾರೆ.

5. ಪ್ರತಿವಾದಿಗೆ ಸಮನ್ಸ್ ಜಾರಿಯಾದ ನಂತರ, ಪ್ರತಿವಾದಿಯರು ಅವರ ಪರ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದರೂ ಸಹ ಯಾವುದೇ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ.

6. ವಾದಪತ್ರದ ಸಂಗತಿಗಳನ್ನು ಗಮನಿಸಿದಾಗ, ಈ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

**: ಅಂಶಗಳು :**

**ಅಂಶ :1 ವಾದಿಯರು, ವಾದಿಯರು ಮತ್ತು ಪ್ರತಿವಾದಿಯರು ಒಟ್ಟು ಕುಟುಂಬದ ಸದಸ್ಯರೆಂದು ಎಂದು ರುಜುವಾತು ಪಡಿಸುವರೇ ?**

**ಅಂಶ :2 ವಾದಿಯರು ದಾವಾ ಷಡ್ಯೂಲ್ ಸ್ವತ್ತುಗಳು ವಾದಿಯರು ಮತ್ತು ಪ್ರತಿವಾದಿಯರು ಪಿತ್ರಾರ್ಜಿತ ಸ್ವತ್ತು ಎಂದು ರುಜುವಾತು ಪಡಿಸುವರೇ ?**

**ಅಂಶ:3 ವಾದಿಯರು ದವೆಯಲ್ಲಿ ಕೋರಿರುವ ದಾವಾ ಸ್ವತ್ತುಗಳಲ್ಲಿ 2/4 ಭಾಗದ ಹಿಸ್ಸೆಯನ್ನು ಪಡೆಯಲು ಅರ್ಹರೇ ?**

**ಅಂಶ :4 ವಾದಿಯರು ದಾವೆಯಲ್ಲಿ ಕೋರಿರುವ ಪರಿಹಾರವನ್ನು ಪಡೆಯಲು ಅರ್ಹರೇ ?**

**ಅಂಶ :5 ಏನು ಆದೇಶ ಅಥವಾ ಡಿಕ್ರಿ ?**

7. 1 ನೇ ವಾದಿಯು ವಾದಪತ್ರದ ಸಂಗತಿಗಳನ್ನು ನಿರೂಪಿಸಲು, ತನ್ನನ್ನು ತಾನು ಪಿ.ಡಬ್ಲ್ಯೂ.1 ಎಂದು ವಿಚಾರಣೆಗೆ ಒಳಪಡಿಸಿಕೊಂಡು, ತನ್ನ ಪರವಾಗಿ ಒಟ್ಟು 05 ದಾಖಲೆಗಳನ್ನು ನಿಪಿ.1 ರಿಂದ 05 ರವರೆಗೆ ಗುರುತಿಸಿಕೊಂಡು ತನ್ನ ಪರ ಸಾಕ್ಷಿದಾರರ ಹೇಳಿಕೆಯನ್ನು ಮುಕ್ತಾಯಗೊಳಿಸಿರುತ್ತಾರೆ. ಪ್ರತಿವಾದಿಯರ ಪರ ವಕೀಲರು ಪಿ.ಡಬ್ಲ್ಯೂ.1 ರವರನ್ನು ಪಾಟೀಸವಾಲು ಮಾಡಿರುವುದಿಲ್ಲ ಹಾಗೂ ತಮ್ಮ ಪರ ಯಾವುದೇ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿರುವುದಿಲ್ಲ.

8. ವಾದಿಯರ ಪರ ವಕೀಲರ ವಾದಗಳನ್ನು ಆಲಿಸಿ, ದಾಖಲೆಗಳನ್ನು ಪರಿಶೀಲಿಸಲಾಯಿತು.

9. ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಲಾಗಿರುತ್ತದೆ.

| | | |
|---|---|---|
| ಅಂಶ 1 ರಿಂದ 4 | ಃ | **ಸಕಾರಾತ್ಮಕವಾಗಿ** |
| ಅಂಶ 5 | ಃ | ಅಂತಿಮ ಆದೇಶದಂತೆ |

ಈ ಕೆಳಕಂಡ ಕಾರಣಗಳಿಗಾಗಿ,

**: : ಕಾರಣಗಳು : :**

**10. ಅಂಶ ಸಂಖ್ಯೆ – 1 ರಿಂದ 4 ಃ** ಸದರಿ ಅಂಶಗಳು ಒಂದಕ್ಕೊಂದು ಪರಸ್ಪರ ಪೂರಕವಾಗಿರುವುದರಿಂದ ಚರ್ಚೆಯ ವೇಳೆ ಅಂಶಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಎಲ್ಲಾ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

11. ವಾದಿಯ ವಾದಪತ್ರದ ಅಂಶಗಳೇನೆಂದರೆ, ವಾದಿಯರು ಮತ್ತು 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಗೆ ಖಾಸಾ ಮಕ್ಕಳುಗಳಾಗಿರುತ್ತಾರೆ. ವಾದಿಯರು

ಮತ್ತು 2 ನೇ ಪ್ರತಿವಾದಿಯರು ಸಹೋದರರಾಗಿರುತ್ತಾರೆ. ವಾದಿಯರು ಮತ್ತು ಪ್ರತಿವಾದಿಯರು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿದ್ದು, ವಾದಿಯರು ಮತ್ತು 2 ನೇ ಪ್ರತಿವಾದಿಯ ತಂದೆ ಹಾಗೂ 1 ನೇ ಪ್ರತಿವಾದಿಯ ಗಂಡನಾದ ಬೋಜೇಗೌಡರು ಬದುಕ್ಕಿದ್ದ ಕಾಲದಲ್ಲಿ ವಾದಿಯರ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಕರ್ತರಾಗಿದ್ದರು. ವಾದಿ ಮತ್ತು ಪ್ರತಿವಾದಿಯರು ತಮ್ಮ ಕುಟುಂಬಕ್ಕೆ ಸೇರಿದ ದಾವಾ ಅನುಸೂಚಿ ಸ್ವತ್ತುಗಳನ್ನು ಒಟ್ಟಾಗಿ ಅನುಭವಿಸುತ್ತಾ ಬಂದಿದ್ದು, ಸದರಿ ದಾವಾ ಷಡ್ಯೂಲ್ ಸ್ವತ್ತುಗಳು ವಾದಿಯರ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಪಿತ್ರಾರ್ಜಿತವಾದ ಸ್ವತ್ತುಗಳಾಗಿರುತ್ತವೆ.

12. ವಾದಿಯರ ಮತ್ತು 2 ನೇ ಪ್ರತಿವಾದಿಯ ತಂದೆ ಹಾಗೂ 1 ನೇ ಪ್ರತಿವಾದಿಯ ಗಂಡನಾದ ಲೇಟ್ ಬೋಜೇಗೌಡರು ದಿನಾಂಕ: 15.08.2012 ರಂದು ಮರಣ ಹೊಂದಿದ್ದು, ಅವರ ಮರಣಾ ನಂತರ 2 ನೇ ಪ್ರತಿವಾದಿಯು ಕುಟುಂಬದ ಹಿರಿಯನಾಗಿದ್ದು, ಒಟ್ಟು ಕುಟುಂಬದ ಕರ್ತನಾಗಿರುತ್ತಾನೆ. ದಾವಾ ಷಡ್ಯೂಲ್ ಸ್ವತ್ತುಗಳು ವಾದಿಯರ ಹಾಗೂ 2 ನೇ ಪ್ರತಿವಾದಿಯ ತಂದೆ ಮತ್ತು 1 ನೇ ಪ್ರತಿವಾದಿಯ ಗಂಡನಾದ ಲೇಟ್ ಬೋಜೇಗೌಡ ಬಿನ್ ಮರಿನಂಜಪ್ಪ ರವರ ಹೆಸರಿನಲ್ಲಿಯೇ ಮುಂದುವರೆದುಕೊಂಡು ಬರುತ್ತಿರುತ್ತವೆ. ಸದರಿ ಸ್ವತ್ತುಗಳನ್ನು ವಾದಿಯರು ಮತ್ತು ಪ್ರತಿವಾದಿಯರು ಒಟ್ಟಾಗಿ ಅನುಭವಿಸುತ್ತಾ ಬರುತ್ತಿರುತ್ತಾರೆ. ಹಾಗೂ ದಾವಾ ಸ್ವತ್ತುಗಳು ವಾದಿಯರಿಗೆ 2/4 ಭಾಗದ ಹಿಸ್ಸೆಯ ಹಕ್ಕು ಇರುತ್ತದೆ ಎಂಬುದಾಗಿದೆ.

13. ಪ್ರತಿವಾದಿಗೆ ಸಮನ್ಸ್ ಜಾರಿಯಾದ ನಂತರ, ಪ್ರತಿವಾದಿಯರು ಅವರ ಪರ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದರೂ ಸಹ ಯಾವುದೇ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ.

14. ವಾದಿಯರು ತನ್ನ ವಾದಪತ್ರದ ಅಂಶಗಳನ್ನು ರುಜುವಾತುಪಡಿಸುವ ಸಲುವಾಗಿ 1 ನೇ ವಾದಿಯು ತನ್ನನ್ನು ಪಿಡಬ್ಲ್ಯು.1 ಎಂದು ವಿಚಾರಣೆಗೆ ಒಳಪಡಿಸಿದ್ದು,

ತನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ವಾದಪತ್ರದ ಅಂಶಗಳನ್ನೇ ಪುನರ್ ಉಚ್ಚರಿಸಿರುತ್ತಾರೆ. ತನ್ನ ಪರವಾಗಿ ಒಟ್ಟು 05 ನಿಪಿ.1 ರಿಂದ 5 ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳೆಂದರೇ, ನಿಪಿ.1 ರಿಂದ 3 ರ ದಾಖಲೆಗಳು ಪಹಣಿ ಪತ್ರಿಕೆಗಳು ಹಾಗೂ ನಿಪಿ.4 ಮತ್ತು 5 ರ ದಾಖಲೆಗಳು ಮ್ಯುಟೇಶನ್ ರಿಜಿಸ್ಟರ್ ಗಿರುತ್ತದೆ.

15. ನಿಪಿ.1 ರಿಂದ 3 ರ ದಾಖಲೆಗಳು ಪಹಣಿ ಪತ್ರಿಕೆಗಳಾಗಿದ್ದು ಅವುಗಳನ್ನು ಗಮನಿಸಿದಾಗ ದಾವಾ ಸ್ವತ್ತುಗಳಾದ ಐಟಂ.ನಂ 1 ರಿಂದ 3 ರ ಸ್ವತ್ತುಗಳು ಬೋಜೇಗೌಡ ಬಿನ್ ಮರಿನಂಜಪ್ಪರವರ ಹೆಸರಿನಲ್ಲಿರುವುದು ಕಂಡು ಬರುತ್ತದೆ, ಸದರಿಯವರು ವಾದಯರ, 2 ನೇ ಪ್ರತಿವಾದಿಯ ತಂದೆಯಾಗಿದ್ದು 1 ನೇ ಪ್ರತಿವಾದಿಯ ಗಂಡನಾಗಿರುತ್ತಾರೆ. ನಿಪಿ.4 ರ ದಾಖಲೆ ಮ್ಯುಟೇಶನ್ ರಿಜಿಸ್ಟರ್ ಆಗಿದ್ದು, ದಾವಾ ಐಟಂ ನಂ. 1 ಮತ್ತು 2 ರ ಸ್ವತ್ತು ಬೋಜೇಗೌಡ ಬಿನ್ ಮರಿನಂಜಪ್ಪರವರ ಹೆಸರಿಗೆ ವಿಭಾಗದಲ್ಲಿ ಬಂದಂತಹ ಸ್ವತ್ತುಗಳಾಗಿರುತ್ತವೆ. ನಿಪಿ.5 ರ ದಾಖಲೆಯು ಗಮನಿಸಿದಾಗ ದಾವಾ ಐಟಂ ನಂ.3 ರ ಸ್ವತ್ತು ನಂಜುಂಡಶೆಟ್ಟಿ ಬಿನ್ ಪಾಪಶೆಟ್ಟಿ ರವರಿಂದ ಸದರಿ ಬೋಜೇಗೌಡ ಬಿನ್ ಮರಿನಂಜಪ್ಪರವರ ಹೆಸರಿಗೆ ಖಾತೆ ಬದಲಾವಣೆಯಾಗಿರುವುದು ಕಂಡು ಬರುತ್ತದೆ. ಹೀಗಾಗಿ ಸದರಿ ಬೋಜೇಗೌಡ ಬಿನ್ ಮರಿನಂಜಪ್ಪರವರು ದಾವಾ ಐಟಂ ನಂ.1 ರಿಂದ 3 ರ ಸ್ವತ್ತುಗಳ ಕಾನೂನು ಬದ್ದ ಮಾಲೀಕರಾಗಿರುತ್ತಾರೆ. ಸದರಿಯವರು ಮೃತಪಟ್ಟಿದ್ದು ಅವರ ವಾರಸುದಾರರಾದ ವಾದಿಯರು ಮತ್ತು ಪ್ರತಿವಾದಿಯರು ಸದರಿ ಸ್ವತ್ತಿನ ಪೌತಿ ಸ್ವತ್ತಿನ ವಾರಸುದಾರರಾಗಿರುತ್ತಾರೆ.

16. ಈ ದಾವೆಯಲ್ಲಿ ಪ್ರತಿವಾದಿಯರಿಗೆ ನ್ಯಾಯಾಲಯದ ಮೂಲಕ ಸಮನ್ಸ್ ಜಾರಿಯಾಗಿದ್ದರೂ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಹಾಗೂ ತಮ್ಮ ಪ್ರತಿವಾದ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಹೀಗಾಗಿ ಪ್ರತಿವಾದಿಯರು ಏಕಪಕ್ಷೀಯವಾಗಿರುತ್ತಾರೆ. ಆದಕಾರಣ ವಾದಿಯರು ತಾವು ತಂದಿರುವ ದಾವೆಯ ಅಂಶಗಳನ್ನು ಮೌಖಿಕ ಹಾಗೂ ದಸ್ತವೇಜು ಸಾಕ್ಷ್ಯಗಳಿಂದ ರುಜುವಾತುಪಡಿಸಲು ಸಫಲವಾಗಿರುವುದರಿಂದ, ಸದರಿಯವರು ವಾದಪತ್ರದಲ್ಲಿ ಕೋರಿರುವಂತೆ ವಾದಿಯರು

ದಾವಾ ಸ್ವತ್ತುಗಳಲ್ಲಿ ತಮ್ಮ 2/4 ನೇ ಭಾಗದ ಹಿಸ್ಸೆಯನ್ನು ಪಡೆಯಲು ಅರ್ಹರಾಗಿರುತ್ತಾರೆ ಎಂದು ಅಭಿಪ್ರಾಯ ಪಡುತ್ತಾ **ಅಂಶ ಸಂಖ್ಯೆ 1 ರಿಂದ 4 ನ್ನು ಸಕಾರಾತ್ಮಕವಾಗಿ** ಉತ್ತರಿಸಲಾಗಿರುತ್ತದೆ.

**17.** **ಅಂಶ ಸಂಖ್ಯೆ ಃ 5 ಃ** ಅಂಶ 1 ರಿಂದ 4 ರಲ್ಲಿ ಚರ್ಚಿಸಿರುವ ಕಾರಣಗಳಿಗಾಗಿ, ಈ ಕೆಳಕಂಡಂತೆ ಆದೇಶ ಮಾಡಲಾಗಿರುತ್ತದೆ.

**ಃ ಆದೇಶ ಃ**

ವಾದಿಯರು ಸಲ್ಲಿಸಿರುವ ದಾವೆಯನ್ನು ಖರ್ಚು ಸಹಿತ ಪುರಸ್ಕರಿಸಲಾಗಿದೆ.

ವಾದಿಯರಿಗೆ ದಾವಾ ಸ್ವತ್ತುಗಳಲ್ಲಿ 2/4 ಭಾಗದ ಹಿಸ್ಸೆಯನ್ನು ಪಡೆದುಕೊಳ್ಳಲು ಅರ್ಹರಾಗಿರುತ್ತಾರೆಂದು ತಿರ್ಮಾನಿಸಲಾಗಿದೆ.

1 ಮತ್ತು 2 ನೇ ಪ್ರತಿವಾದಿಯರು 2/4 ಭಾಗದ ಹಿಸ್ಸೆಯನ್ನು ಪಡೆದುಕೊಳ್ಳಲು ಅರ್ಹರಾಗಿರುತ್ತಾರೆಂದು ತಿರ್ಮಾನಿಸಲಾಗಿದೆ.

ತಮ್ಮ ಸ್ವತ್ತಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಶುಲ್ಕವನ್ನು ಪಾವತಿಸಲು 1 ಮತ್ತು 2 ನೇ ಪ್ರತಿವಾದಿಯರಿಗೆ ಸೂಚಿಸಲಾಗಿದೆ.

ತೀರ್ಪಿನಂತೆ ಡಿಕ್ರಿ ಬರೆಯಿರಿ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಹೇಳಿ, ಅವರಿಂದ ಕಂಪ್ಯೂಟರ್ ನಲ್ಲಿ ಟೈಪ್ ಮಾಡಿಸಿ, ನನ್ನಿಂದ ತಿದ್ದುಪಡಿ ಮಾಡಿ ಇಂದು ದಿನಾಂಕಃ **11 ನೇ ಮಾರ್ಚ್ 2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

**(ಶ್ರೀಮತಿ ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ಚನ್ನರಾಯಪಟ್ಟಣ.**

**:: ಪರಿಚ್ಛೇದ ::**

**1. ವಾದಿಯ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ .**

ಪ್ರಾಸಾ.1 : ನಾಗರಾಜೇಗೌಡ

**2. ವಾದಿಯ ಪರ ಗುರುತಿಸಲಾದ ದಸ್ತಾವೇಜುಗಳ ಪಟ್ಟಿ**

ನಿಪಿ.1 ರಿಂದ 3 : ಪಹಣಿ ಪತ್ರಿಕೆಗಳು
ನಿಪಿ.4 ಮತ್ತು 5 : ಮ್ಯುಟೇಶನ್ ರಿಜಿಸ್ಟರ್ ಗಳು

**3. ಪ್ರತಿವಾದಿಗಳ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ :** ಇಲ್ಲ

**4. ಪ್ರತಿವಾದಿಗಳ ಪರ ಗುರುತಿಸಲಾದ ದಸ್ತಾವೇಜುಗಳ ಪಟ್ಟಿ :** ಇಲ್ಲ

**(ಶ್ರೀಮತಿ ಕುಸುಮ ವಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ಚನ್ನರಾಯಪಟ್ಟಣ.**

**(ಈ ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)**

**(ತೀರ್ಪಿನ ಪ್ರತಿಯನ್ನು ಪ್ರತ್ಯೇಕವಾಗಿ ಲಗತ್ತಿಸಲಾಗಿದೆ.)**

**:: ಆದೇಶ ::**

ವಾದಿಯರು ಸಲ್ಲಿಸಿರುವ ದಾವೆಯನ್ನು ಖರ್ಚು ಸಹಿತ ಪುರಸ್ಕರಿಸಲಾಗಿದೆ.

ವಾದಿಯರಿಗೆ ದಾವಾ ಸ್ವತ್ತುಗಳಲ್ಲಿ 2/4 ಭಾಗದ ಹಿಸ್ಸೆಯನ್ನು ಪಡೆದುಕೊಳ್ಳಲು ಅರ್ಹರಾಗಿರುತ್ತಾರೆಂದು ತಿರ್ಮಾನಿಸಲಾಗಿದೆ.

1 ಮತ್ತು 2 ನೇ ಪ್ರತಿವಾದಿಯರು 2/4 ಭಾಗದ ಹಿಸ್ಸೆಯನ್ನು ಪಡೆದುಕೊಳ್ಳಲು ಅರ್ಹರಾಗಿರುತ್ತಾರೆಂದು ತಿರ್ಮಾನಿಸಲಾಗಿದೆ.

ತಮ್ಮ ಸ್ವತ್ತಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಶುಲ್ಕವನ್ನು ಪಾವತಿಸಲು 1 ಮತ್ತು 2 ನೇ ಪ್ರತಿವಾದಿಯರಿಗೆ ಸೂಚಿಸಲಾಗಿದೆ.

ತೀರ್ಪಿನಂತೆ ಡಿಕ್ರಿ ಬರೆಯಿರಿ.

(ಶ್ರೀಮತಿ ಕುಸುಮ ವಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಚನ್ನರಾಯಪಟ್ಟಣ.

In view of the directions issued by the Hon'ble Apex Court in a Judgment reported in ***2022 SCC On-line SC 737 (Kattukandi Edathil Krishnan and***

***another V/s Kattukandi Edathil Valsan and others)*** and Circular No.DJA-1/1105 dated 21.10.2022 issued by Hon'ble High Court of Karnataka, when the preliminary decree is passed in a partition suit, the Court has to initiate final decree proceedings under Order 20 Rule 18 of CPC by sumoto.

Hence, office is directed to register a Final Decree Proceedings under Order 20 Rule 18 of CPC based on preliminary decree after appeal period is over and keep a certified copy of preliminary decree passed in this suit and other records in the FDP proceedings.

**(Kusuma.V)**
**Prl. Civil Judge & JMFC.,**
**Channarayapatna.**